**ಇಂದು ದಿನಾಂಕ 24.01.2026 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಾದಿ ಹಾಕಿರುವ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ಮಾವ ಖರೀದಿಸಿರುವ ಆಸ್ತಿ ಎಂದರೆ ನಿಜ. ನನ್ನ ಮಾವ 8 ವರ್ಷಗಳ ಹಿಂದೆ ಮೃತರಾದರು. ನಮ್ಮ ಕುಟುಂಬದ ಸಮಸ್ಯೆಗಳಿಗೆ ವಾದಿಗಳನ್ನು ಭೇಟಿಯಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ನನ್ನ ಮಾವ ಬದುಕಿದ್ದಾಗ ಕೇಳಿಕೊಂಡಿದ್ದರು ಎಂದರೆ ನಿಜ. ವಾದಿಗಳು ಮತ್ತು ಪ್ರತಿವಾದಿಗಳು ಎಲ್ಲರ ಸಮಕ್ಷಮ ದಾವಾ ಆಸ್ತಿಯನ್ನು ರೂ.90 ಲಕ್ಷಕ್ಕೆ ಮಾರಾಟ ಮಾಡಲು ತೀರ್ಮಾನ ಮಾಡಿದ್ದರು ಎಂದರೆ ಗೊತ್ತಿಲ್ಲ. ಅದೇ ಪ್ರಕಾರ ದಿನಾಂಕಃ 05.08.2019 ರಂದು ಕರಾರು ಪತ್ರ ಮಾಡಿ ರೂ.30 ಲಕ್ಷವನ್ನು ಚೆಕ್ ಮೂಲಕ ವಾದಿಗಳು ನಮ್ಮ ಕುಟುಂಬದವರಿಗೆ ಕೊಟ್ಟಿದ್ದಾರೆ ಎಂದರೆ ಸಾಲದ ರೂಪವಾಗಿ ತೆಗೆದುಕೊಂಡಿದ್ದೇವೆ. ದಿನಾಂಕಃ 13.12.2019 ರಂದು ವಾದಿಗಳ ಮುಖಾಂತರ ರೂ.10 ಲಕ್ಷ ಹಣವನ್ನು ಚೆಕ್ ಮೂಲಕ ನನ್ನ ಮಗಳು 2 ನೇ ಪ್ರತಿವಾದಿ ಹೆಸರಿನಲ್ಲಿ ಪಡೆದುಕೊಂಡಿದ್ದೇವೆ ಎಂದರೆ ಗೊತ್ತಿಲ್ಲ. ಸದರಿ ವ್ಯವಹಾರಗಳು ನನ್ನ ಗಂಡನ ಸಮ್ಮುಖದಲ್ಲಿ ನಡೆದಿದೆ ಎಂದರೆ ಗೊತ್ತಿಲ್ಲ. ನನ್ನ ಗಂಡ ಏನೂ ಹೇಳುತ್ತಿರಲಿಲ್ಲ. ದಾವಾ ಆಸ್ತಿಯ ಪಹಣಿ ಈಗ ನನ್ನ ಮಾವನ ಹೆಸರಿನಲ್ಲಿ ಇದೆ. ನನ್ನ ಗಂಡ 5 ವರ್ಷಗಳ ಹಿಂದೆ ಮೃತರಾಗಿದ್ದಾರೆ. ಅದಾದನಂತರ ವಾದಿಗಳು ಸಾಕಷ್ಟು ಸಲ ನಮ್ಮನ್ನು ಕರಾರಿನ ಪ್ರಕಾರ ಕ್ರಯಪತ್ರ ಮಾಡಿಕೊಡಿ ಎಂದು ಕೇಳಿಕೊಂಡರು ಎಂದರೆ ಗೊತ್ತಿಲ್ಲ. ದಿನಾಂಕಃ04.12.2021 ರಂದು ವಾದಿಗಳು ವಕೀಲರ ಮೂಲಕ ನೋಟೀಸ್ ನ್ನು ಕೊಟ್ಟರು ಎಂದರೆ ನಿಜ. ನಾಗಮಂಗಳದ ರಾಮಚಂದ್ರಪ್ಪನ ಮಗ ರಕ್ಷಿತ್ ನನಗೆ ಸಂಬಂಧಿಕರು. ನಾನು ಸಲ್ಲಿಸಿರುವ ತಕರಾರಿನ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಖಾಲಿ ಪೇಪರ್ ನಲ್ಲಿ ಸಹಿ ಮಾಡಿಸಿಕೊಂಡು ಹೋಗಿದ್ದ ಬಗ್ಗೆ ಪೋಲೀಸ್ ಕಂಪ್ಲೇಂಟ್ ಕೊಟ್ಟಿಲ್ಲ. ದಿನಾಂಕಃ 05.08.2019 ರ ಕರಾರಿನ ಪ್ರಕಾರ ರೂ.40 ಲಕ್ಷಗಳನ್ನು ಪಡೆದುಕೊಂಡು ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**